## ಈ ಲೇಖನದ ವಿಷಯಾನುಕ್ರಮಣಿಕೆ


**ಕಾಲನಿಯಾಮಕ ಹರಿಯ ಕುರಿತು ತಿಳಿಸಿ** 2

**ಕಾಲ ಎಂದರೇನು?** 3

**ಕಾಲಾಂತರ್ಗತ** 4

**ಕಾಲನಿಯಾಮಕ** 7

**ಕಾಲಾತೀತ** 10

**ತ್ರಿಕಾಲಜ್ಞ** 13

**ಕಾಲೋತ್ಪಾದಕ** 16

**ಕಾಲಪ್ರವರ್ತಕ** 21

**ಕಾಲನಿವರ್ತಕ** 27

**ಕಾಲಮೂರ್ತಿ** 29

- ಸಕಲರೂಪಗಳೂ ಕಾಲಮೂರ್ತಿಗಳೇ 29
- ಸರ್ವಸಂಹಾರಕನಾದ ಭಗವಂತ ಕಾಲಮೂರ್ತಿ 30
- ಸರ್ವವ್ಯಾಪ್ತನಿಗೆ ಕಾಲ ಎಂದು ಹೆಸರು 31
- ರುದ್ರದೇಹಸ್ಥನಿಗೆ ಕಾಲ ಎಂದು ಹೆಸರು 32
- ಅನಂತ ಕಾಲದಲ್ಲಿ ಅನಂತ ಕಾಲಮೂರ್ತಿಗಳು 32

# ವಿಶ್ವನಂದಿನಿ ಪ್ರಶ್ನೋತ್ತರಮಾಲೆ — 68

## ಕಾಲನಿಯಾಮಕ ಹರಿಯ ಕುರಿತು ತಿಳಿಸಿ

Acharyare namaskaaagalu. Would you please explain the following words of Sri jaganathadasaru. Kaalaniyamaka, kaalantargata ,kaalaatheetha trikaalajna, kaalotpaadaka, kaalapravarthaka kaalanivartaka kaalamoorthi tava daasoham

— Jayashree, Bengaluru.

ಆಚಾರ್ಯರೇ ನಮಸ್ಕಾರಗಳು. ಶ್ರೀಜಗನ್ನಾಥದಾಸಾರ್ಯರು ತವ ದಾಸೋಹಂ ಎಂಬ ಪದ್ಯದಲ್ಲಿ ಬಳಸಿರುವ ಈ ಶಬ್ದಗಳ ಅರ್ಥವನ್ನು ದಯವಿಟ್ಟು ತಿಳಿಸಿ.  ಕಾಲನಿಯಾಮಕ, ಕಾಲಾಂತರ್ಗತ, ಕಾಲಾತೀತ, ತ್ರಿಕಾಲಜ್ಞ ಕಾಲೋತ್ಪಾದಕ, ಕಾಲಪ್ರವರ್ತಕ, ಕಾಲನಿವರ್ತಕ, ಕಾಲಮೂರ್ತಿ ತವ ದಾಸೋಹಂ.

— ಜಯಶ್ರೀ, ಬೆಂಗಳೂರು.

## ಕಾಲ ಎಂದರೇನು?

ನಾವು ಯಾವುದೇ ವಸ್ತುವನ್ನು ತಿಳಿಯುವಾಗ ಒಂದರ ಹಿಂದೆ, ಅಥವಾ ಮುಂದೆ ತಿಳಿಯುತ್ತೇವೆ. ನಮ್ಮ ತಂದೆ ಎಂದಾಗ ನನಗಿಂತ ಮೊದಲು ಜನಿಸಿದವರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಮ್ಮ ಮರಿತಾತನ ಮರಿತಾತ ಕಟ್ಟಿಸಿದ ದೇವಸ್ಥಾನವಿದು ಎಂದಾಗ ಅದನ್ನು ಕಟ್ಟುವ ಸಂದರ್ಭದಲ್ಲಿ ನಾನು ಹುಟ್ಟಿರಲು ಸಾಧ್ಯವೇ ಇಲ್ಲ ಎನ್ನುವದು ಎಲ್ಲರಿಗೂ ನಿರ್ಣಯವಾಗುತ್ತದೆ. ನಾವು ಪ್ರತ್ಯೇಕವಾಗಿ ಹೇಳಿಲ್ಲ, ಆದರೂ ನಿರ್ಣಯವಾಗುತ್ತದೆ. ಹೀಗೆ ಒಂದು ಮೊದಲು, ಒಂದು ಅನಂತರ ಎಂಬ ಜ್ಞಾನ ನಮಗೆ ಯಾವುದರ ಆಧಾರದ ಮೇಲೆ ಉಂಟಾಗುತ್ತದೆಯೋ ಅದೇ ಕಾಲ.

ಇನ್ನು, ಈಗ, ಆಗ, ಮೊದಲು, ಆಮೇಲೆ, ನಿನ್ನೆ, ಇಂದು, ನಾಳೆ, ಅವತ್ತು, ಇವತ್ತು ಇತ್ಯಾದಿ ಪ್ರಯೋಗಗಳಿಗೆ ಆಧಾರವಾದ ವಸ್ತುವೇ ಕಾಲ.

## ಕಾಲಾಂತರ್ಗತ

ಈ ಕಾಲ ಎನ್ನುವ ವಸ್ತುವಿನ ಅಂತರ್ಯಾಮಿ-ಯಾಗಿರುವ ಭಗವಂತ ಕಾಲಾಂತರ್ಗತ. ಅವನಿಗೂ ಕಾಲ ಎಂದೇ ಹೆಸರು ಎಂದು ಶ್ರೀ ಮಂತ್ರಾಲಯ-ಪ್ರಭುಗಳು ತಿಳಿಸುತ್ತಾರೆ — “ಕಲ ಜ್ಞಾನೇ ಇತಿ ಧಾತೋಃ, ಸರ್ವಮಾಕಲಯತೀತಿ ಕಾಲನಾಮಾ ಕಾಲಸ್ಥಃ” ಎಂದು.

ನಮ್ಮ ಅಂತರ್ಯಾಮಿಯಾದ ಭಗವಂತ ನಮ್ಮಿಂದ ಕಾರ್ಯವನ್ನು ಮಾಡಿಸುತ್ತಾನೆ. ನಾನು ಅನಾದಿಕಾಲದ ಹಿಂದೆ ಮಾಡಿರುವ ಕರ್ಮವೂ ಭಗವಂತನಿಗೆ ತಿಳಿದಿದೆ, ಮತ್ತು ಅನಂತ ಕಾಲದ ಮುಂದೆಯೂ ಮಾಡುವ ಕರ್ಮ ಭಗವಂತನಿಗೆ ತಿಳಿದಿದೆ. ಕಾರಣ ಅವನೇ ಮಾಡಿಸಿದ್ದು.

ಹಾಗೆ, ಆನಾದಿಕಾಲದಿಂದ ಬರುತ್ತಿರುವ ಕಾಲಪ್ರವಾಹದಲ್ಲಿ ಒಂದೊಂದು ಕ್ಷಣದ ಅನಂತಾಂಶದಲ್ಲಿಯೂ ಏನೇನು ಆಗಿದೆ ಎಂದು ತಿಳಿದವನು ಭಗವಂತ ಎಂದು ಆಚಾರ್ಯರು ಭಾಗವತತಾತ್ಪರ್ಯನಿರ್ಣಯದಲ್ಲಿ ತಿಳಿಸುತ್ತಾರೆ —

**ನಿತ್ಯಜ್ಞಾನದೃಶಾ ನಿತ್ಯಂ**
**ಲವಕಾಲಮಪೀಶ್ವರಃ**
**ಪಶ್ಯೇತ್ ತಾತ್ಕಾಲಿಕಂ**
**ಚೈವ ತಸ್ಮಾದನಿಮಿಷೋ ಹರಿಃ**

**ಕಾಲಸ್ಯ ಅನಿಮಿಷತ್ವಂ ಚ**
**ಲವಾದೇರ್ನಿತ್ಯವೀಕ್ಷಣಾತ್ ಎಂದು.**

ಬಹಳ ಅದ್ಭುತವಾದ ಪ್ರಮೇಯವಿದು. ನೋಡಿ, ಒಂದು ಕ್ಷಣ ಕಳೆದು ಹೋದ ತಕ್ಷಣ ಅದನ್ನು ನಾವು ಮತ್ತೆ ಪಡೆಯಲು ಯಾರಿಗೂ ಸಾಧ್ಯವಿಲ್ಲ. ಆದರೆ, ಕೆಲವು ಸಂದರ್ಭದಲ್ಲಿ ಆ ಕ್ಷಣದಲ್ಲಿ ನಡೆದ ಘಟನೆಯನ್ನು ಇಡಿಯ ಜೀವನದಲ್ಲಿ ನಾವು ನೆನಪಿಟ್ಟುಕೊಂಡು ನಮ್ಮ ನೆನಪಿನಲ್ಲಿ ಅದನ್ನು ಜೀವಂತವಾಗಿರಿಸುತ್ತೇವೆ. ಅಂದರೆ, ಒಂದು ಕಾಲದಲ್ಲಿ ನಡೆದ ಘಟನೆ ಮುಗಿದು ಹೋದರೂ ಅದರ ನೆನಪು ನಮಗಿದ್ದಲ್ಲಿ ಅದು ಜೀವಂತವಿದ್ದಂತೆ ಎಂದು ನಾವು ವ್ಯವಹರಿಸುತ್ತೇವೆ.

ಆದರೆ ಭಗವಂತನ ವಿಷಯದಲ್ಲಿ ಈ ತತ್ವ ಇನ್ನೂ ಅದ್ಭುತ. ದೇವರಿಗೆ ಮರೆವೇ ಇಲ್ಲವಾದ್ದರಿಂದ

ನೆನಪಿನ ಅಗತ್ಯವೇ ಇಲ್ಲ. ಅವನದು ನಿತ್ಯಜ್ಞಾನ. ಸಕಲ ಜ್ಞಾನಗಳೂ ಅವನಿಗೆ ಸದಾ ಇವೆ. ಮರೆಯುವದಿಲ್ಲ, ಮುಗಿಯುವದಿಲ್ಲ. ಹೀಗಾಗಿ ಕಾಲದ ಸೂಕ್ಷ್ಮ ಸೂಕ್ಷ್ಮ ಘಟ್ಟಗಳಲ್ಲಿ ನಡೆದ ಸಕಲವೂ ಭಗವಂತನಿಗೆ ಸದಾ ಗೋಚರವಾದ್ದರಿಂದ ಅವನ ದೃಷ್ಟಿಯಿಂದ ಅವು ಸದಾ ಜೀವಂತ. ಹೀಗೆ ಭೂತ, ವರ್ತಮಾನ ಮತ್ತು ಭವಿಷ್ಯ ಎಲ್ಲವನ್ನೂ ಎಲ್ಲ ಕಾಲದಲ್ಲಿಯೂ ತಿಳಿದಿದ್ದಾನೆಯಾದ್ದರಿಂದ ಆ ಭಗವಂತನಿಗೆ ಅನಿಮಿಷ ಎಂದು ಹೆಸರು.

ಜೊತೆಯಲ್ಲಿ, ಕಾಲ ಎನ್ನುವ ಆ ವಸ್ತುವಿನ ಅಂತರ್ಯಾಮಿಯಾಗಿ ಭಗವಂತ ಇದ್ದಾನೆ. ಹೀಗಾಗಿ ಕಾಲ ಮುಗಿದು ಹೋದರೂ ಕಾಲನ ಅಂತರ್ಯಾಮಿಯಾದ ಭಗವಂತನಿಗೆ ಸಾವಿಲ್ಲ. ಅವನು ನಾಶವಾಗುವದಿಲ್ಲ. ಅನಾದಿಕಾಲದ ಹಿಂದಿನ ಒಂದು ಕ್ಷಣದ ಅಂತರ್ಯಾಮಿಯಾಗಿದ್ದ ಭಗವಂತನೇ ಈ ಕ್ಷಣದ ಅಂತರ್ಯಾಮಿಯಾಗಿರುವದು. ಆದ್ದರಿಂದ ಆ ಕ್ಷಣದಲ್ಲಿ ನಡೆದ ಅನಂತ ಘಟನೆಗಳೂ

ಭಗವಂತನಿಗೆ ಸುಸ್ಪಷ್ಟವಾಗಿ ಗೋಚರ, ಕಾರಣ ಅವನೇ ನಿಂತು ಮಾಡಿಸಿರುವ ಕಾರ್ಯಗಳವು.

## ಕಾಲನಿಯಾಮಕ

ಕಾಲವನ್ನು ನಿಯಮಿಸುವ ಭಗವಂತನಿಗೆ ಕಾಲನಿಯಾಮಕ.

ನೋಡಿ, ಕಾಲ ಎನ್ನುವದು ನಿರಂತರ ಪ್ರಕ್ರಿಯೆ. ಕ್ಷಣ ಎಂದರೆ ಇಷ್ಟು ಸಮಯ, ಮುಹೂರ್ತ ಎಂದರೆ ಇಷ್ಟು ಸಮಯ, ಅಹೋರಾತ್ರ ಎಂದರೆ ಇಷ್ಟು ಸಮಯ, ಹಾಗೆಯೇ, ಗಳಿಗೆ, ಪಳಗಳಿಂದ ಆರಂಭಿಸಿ ಮಹಾಕಾಲದವರೆಗಿನ ಸಮಸ್ತ ಕಾಲದ ಪ್ರಭೇದಗಳಿವೆ. ಅವುಗಳಿಗೆ ಅನಾದಿಕಾಲದ ಹಿಂದೆ ಎಷ್ಟು ಪರಿಮಾಣವಿತ್ತೋ ಅಷ್ಟೇ ಪರಿಮಾಣ ಇವತ್ತಿಗೂ ಇದೆ, ಮುಂದೆಯೂ ಇರುತ್ತದೆ.

ಹಿಂದಿನ ಸೃಷ್ಟಿಗಳಲ್ಲಿ ಬ್ರಹ್ಮಾಂಡ ಹೇಗಿತ್ತೋ ಹಾಗೆಯೇ ಈ ಸೃಷ್ಟಿಯಲ್ಲಿಯೂ ಇದೆ, ಮುಂದಿನ ಸೃಷ್ಟಿಗಳಲ್ಲಿಯೂ ಇದೆ. ಆದರೆ ಸ್ವಲ್ಪ ವ್ಯತ್ಯಾಸ ಇದ್ದೇ ಇರುತ್ತದೆ. ಹಾಗೆಯೇ ಪುರಾಣಗಳು

ಭಾರತಗಳಲ್ಲಿಯೂ ಸ್ವಲ್ಪ ಸ್ವಲ್ಪ ವ್ಯತ್ಯಾಸ ಕಂಡು ಬರುತ್ತದೆ.

ಆದರೆ ವೇದ ಮತ್ತು ಕಾಲಗಳಲ್ಲಿ ಹಾಗಲ್ಲ. ವೇದಗಳು ಅನಾದಿಕಾಲದಿಂದ ಅನಂತಕಾಲದ ವರೆಗೆ ಏಕರೂಪ.

ಹಾಗೆಯೇ ಕಾಲದ ಪರಿಮಾಣಗಳೂ ಸಹ ಏಕರೂಪ. ಅವುಗಳಲ್ಲಿ ಬದಲಾವಣೆಯಿಲ್ಲ.

ಕಾಲಗಳನ್ನು ಈ ರೀತಿ ಏಕಪ್ರಕಾರವಾಗಿರುವಂತೆ ನಿಯಮಿಸುವವನು ಶ್ರೀಹರಿ. ಕಾಲನಿಯಾಮಕ.

ಮತ್ತು ಕಾಲ ಜಂಬೂದ್ವೀಪದಲ್ಲಿರುವಂತೆ ಪ್ಲಕ್ಷದ್ವೀಪದಲ್ಲಿಲ್ಲ, ಬೇರೆ ದ್ವೀಪದಲ್ಲಿ ಬೇರೆಯ ರೀತಿಯ ಕಾಲ. ಅಷ್ಟೇಕೆ ನಮಗೆ ಹಗಲಿದ್ದಾಗ ಇದೇ ಜಂಬೂದ್ವೀಪದಲ್ಲಿ ಮತ್ತೊಬ್ಬರಿಗೆ ರಾತ್ರಿ. ಅಂದರೆ ಹಗಲಿರುವ ಪ್ರದೇಶದಲ್ಲಿ ಹಗಲಿನ ಕಾಲದ ಕಾರ್ಯವನ್ನೂ, ರಾತ್ರಿಯಿದ್ದ ಪ್ರದೇಶದಲ್ಲಿ ರಾತ್ರಿಯ ಕಾರ್ಯವನ್ನು, ಹೀಗೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಏಕಕಾಲಕ್ಕೆ ಸಂಧ್ಯಾ, ಪೂರ್ವಾಹ್ಣ, ಮಧ್ಯಾಹ್ನ, ಅಪರಾಹ್ಣ ಇತ್ಯಾದಿಯಾಗಿ ಅನೇಕ

ಕಾಲಗಳಿವೆ. ಕಾಲ ಒಂದೇ ಪ್ರಭೇಧ ಬೇರೆ. ಆ ಎಲ್ಲ ವಿವಿಧ ರೀತಿಯ ಕಾಲಗಳನ್ನು ಏಕಕಾಲಕ್ಕೆ ನಿಯಮಿಸುವ ನಮ್ಮ ಸ್ವಾಮಿಗೆ ಕಾಲನಿಯಾಮಕ ಎಂದು ಹೆಸರು.

## ಕಾಲಾತೀತ

ಅತೀತ ಎಂದರೆ ದಾಟಿದ್ದು ಎಂದು ಅರ್ಥವಿದೆ. ಕಾಲವನ್ನು ದಾಟಿದವನು ಕಾಲಾತೀತಿ. ಅರ್ಥಾತ್ ಕಾಲವನ್ನು ಮೀರಿದವನು ಎಂದರ್ಥ.

ನಾವೆಲ್ಲರೂ ಕಾಲದ ಪರಿಣಾಮಕ್ಕೆ ಒಳಗಾದವರು. ರಾತ್ರಿ ಬಂದರೆ ನಮಗೆ ನಿದ್ರೆ ಬರುತ್ತದೆ, ಹಗಲಾದರೆ ಎಚ್ಚರವಾಗುತ್ತದೆ. ಹುಟ್ಟಿದ ನಂತರ ಹದಿನೈದು ವರ್ಷ ಬಾಲ್ಯ, ಆ ನಂತರ ತಾರುಣ್ಯ, ಆ ನಂತರ ವೃದ್ಧಾಪ್ಯ ಹೀಗೆ ಕಾಲದ ಪರಿಣಾಮಕ್ಕೆ ಒಳಗಾಗುತ್ತೇವೆ.

ಮಹಾಭಾರತದಲ್ಲಿ ಬರುವ ಹನುಮ-ಭೀಮ ಸಂವಾದದಲ್ಲಿ ಒಂದು ಅದ್ಭುತವಾದ ಪ್ರಮೇಯವನ್ನು ನಿರೂಪಿಸಲಾಗಿದೆ — ಭೂಮಿಯ ಪ್ರತಿಯೊಂದು ಭಾಗ, ದೇಶಗಳು ಕಾಲದ ಪ್ರಭಾವಕ್ಕೊಳಗಾಗುತ್ತವೆ, ಅಂದರೆ ಭರತಭೂಮಿ ಕೃತಯುಗದಲ್ಲಿ ಒಂದು ರೀತಿ, ತ್ರೇತೆಯಲ್ಲಿ ಒಂದು ರೀತಿ, ದ್ವಾಪರದಲ್ಲಿ ಒಂದು ರೀತಿ, ಕಲಿಯಲ್ಲಿ ಒಂದು ರೀತಿಯಿರುತ್ತದೆ. ಕೃತಯುಗದಲ್ಲಿ

ಬಯಸಿದಾಗ ಬಯಸಿದ ಭೂಮಿಯಲ್ಲಿ ಬಯಸಿದ ಬೆಳೆಯನ್ನು ಬೆಳೆಯಬಹುದು. ಕಲಿಯುಗದಲ್ಲಿ ಹಾಗಿಲ್ಲ, ಚಳಿಗಾಲದ ಬೆಳೆಯನ್ನು ಬೇಸಿಗೆಯಲ್ಲಿ ಬೆಳೆಯಲು ಸಾಧ್ಯವಿಲ್ಲ, ಬೇಸಿಗೆಯ ಬೆಳೆಯನ್ನು ಮಳೆಗಾಲದಲ್ಲಿ ಬೆಳೆಯಲು ಸಾಧ್ಯವಿಲ್ಲ.

ಕೃತಯುಗದಲ್ಲಿ ಹಸುಗಳು ಬಯಸಿದಾಗ ಬಯಸಿದಷ್ಟು ಹಾಲನ್ನು ನೀಡುತ್ತವೆ. ಕಲಿಯುಗದಲ್ಲಿ ಹಾಗಲ್ಲ, ಅವು ನೀಡಿದಷ್ಟು ಹಾಲನ್ನು ನಾವು ಪಡೆಯಬೇಕು.

ಹೀಗೆ ಜಗತ್ತಿನ ಪ್ರತಿಯೊಂದು ವಸ್ತುವೂ ಕಾಲದ ಪರಿಣಾಮಕ್ಕೆ ಒಳಗಾಗಿರುವಂತಹುದೇ.

ಕಾಲದ ಪರಿಣಾಮಕ್ಕೆ ಒಳಗಾಗದ ವಸ್ತುಗಳು ಎರಡೇ ಎಂದು ಆಚಾರ್ಯರು ಹೇಳುತ್ತಾರೆ — ಮೂಲಪ್ರಕೃತಿಗೆ ಅಭಿಮಾನಿನಿಯಾದ ಮಹಾಲಕ್ಷ್ಮೀದೇವಿಯರು ಮತ್ತು ಅನಂತ ಸಾಮರ್ಥ್ಯದ ಶ್ರೀಮನ್ನಾರಾಯಣ.

ಮುಕ್ತರು ಕಾಲದ ಪ್ರಭಾವಕ್ಕೆ ಈಗ ಒಳಗಾಗದಿದ್ದರೂ ಹಿಂದೆ ಒಳಗಾಗಿದ್ದವರೇ. ಹೀಗಾಗಿ ಅವರೂ ಪೂರ್ಣವಾಗಿ ಕಾಲಾತೀತರಲ್ಲ.

ಭಗವಂತ ಪರಿಪೂರ್ಣನಾದ ಕಾರಣಕ್ಕೆ ಅವನೇ ಸ್ವತಂತ್ರವಾಗಿ ಕಾಲಾತೀತ. ಕಾಲದ ಯಾವ ಪ್ರಭಾವಕ್ಕೂ ಒಳಗಾಗದವನು.

ಕಾಲಕ್ಕೆ ತಕ್ಕಂತೆ ಎಲ್ಲವೂ ಬದಲಾಗುತ್ತವೆ, ಶ್ರೀಹರಿ ಬದಲಾಗುವದಿಲ್ಲ. ಅದಕ್ಕಾಗಿಯೇ ಅವನು ಶಾಶ್ವತ, ಕಾಲಾತೀತ.

ಕಾಲ ಎಲ್ಲರನ್ನೂ ಕಾಡಿಸುತ್ತದೆ, ಆದರೆ ಶ್ರೀ ಲಕ್ಷ್ಮೀನಾರಾಯಣರನ್ನು ಕಾಡಿಸಲು ಸಾಧ್ಯವಿಲ್ಲ, ಆದ್ದರಿಂದ ಅವರು ಕಾಲಾತೀತರು.

ಕಾಲವಿಲ್ಲದೆ ಇರಲಿಕ್ಕೆ ಕಾಲಕ್ಕೂ ಸಾಧ್ಯವಿಲ್ಲ. ಆದರೆ ಕಾಲದ ಅಪೇಕ್ಷೆಯೇ ಇಲ್ಲದೇ ಇರಬಲ್ಲ ಸಾಮರ್ಥ್ಯ ಶ್ರೀಲಕ್ಷ್ಮೀನಾರಾಯಣರಿಗಿದೆ. ಆದ್ದರಿಂದಲೂ ಕಾಲಾತೀತರು.

ಶ್ರೀಮದಾಚಾರ್ಯರು ಈ ತತ್ವಗಳನ್ನು ಮಾಂಡೂಕ್ಯದ ಭಾಷ್ಯದಲ್ಲಿ ತಿಳಿಸಿದ್ದಾರೆ —

**पूर्णस्तु हरिरेवैको नान्यत् पूर्णं कदाचन ।**
**विना च प्रकृतिं नान्यत् कालातीतं परात्मनः ।।**

**कालश्चैव दिशो वेदाः प्रकृत्यात्मान ईरिताः ।**
**अभिमानात्तु जीवानां न कालातीतता भवेत् ।।**
**मुक्तानामपि पूर्वत्र कालसम्बन्ध ईरितः ।**

## ತ್ರಿಕಾಲಜ್ಞ

ತ್ರಿಕಾಲ ಎಂದರೆ ಮೂರು ಕಾಲಗಳು. ಭೂತಕಾಲ, ವರ್ತಮಾನಕಾಲ, ಮತ್ತು ಭವಿಷ್ಯತ್ಕಾಲ. ಹಿಂದೆ, ಇಂದು ಮತ್ತು ಮುಂದೆ. ಈ ಮೂರೂ ಕಾಲಗಳನ್ನು ತಿಳಿದವನು.

ಮೂರು ಕಾಲಗಳ ಜ್ಞಾನ ನಮಗೂ ಇದೆ. ಹಿಂದಿನ ಕಾಲ, ಇಂದಿನ ಕಾಲ ಮತ್ತು ಮುಂದಿನ ಕಾಲ ಎಂದು. ಆ ರೀತಿಯ ಸಾಮಾನ್ಯ ಜ್ಞಾನವಲ್ಲ.

ಆ ಕಾಲಗಳಲ್ಲಿ ನಡೆದ/ನಡೆಯುತ್ತಿರುವ/ನಡೆಯಲಿರುವ ಸಮಸ್ತ ಘಟನೆಗಳನ್ನೂ ತಿಳಿದವನು ತ್ರಿಕಾಲಜ್ಞ.

ಋಷಿಗಳೂ ತ್ರಿಕಾಲಜ್ಞಾನಿಗಳು. ಆದರೆ ಅವರ ಜ್ಞಾನಕ್ಕೂ ಹರಿಯ ಜ್ಞಾನಕ್ಕೂ ಅನಂತ ವ್ಯತ್ಯಾಸವಿದೆ.

ಋಷಿಗಳು ಕೇವಲ ಕೆಲವರ ಕುರಿತಾದ ಘಟನೆಯನ್ನು ತಿಳಿಯುತ್ತಾರೆ. ಆದರೆ ಅನಂತ ಜೀವರಾಶಿಗಳ ಅನಂತ ಕಾಲದ ಅನಂತ ಕರ್ಮವನ್ನೂ ತಿಳಿದವನು ತ್ರಿಕಾಲಜ್ಞ.

ಋಜುದೇವತೆಗಳಿಗೂ ಈ ರೀತಿಯ ತ್ರಿಕಾಲಜ್ಞಾನವಿದೆ. ಆದರೆ ದೇವರ ತ್ರಿಕಾಲಜ್ಞಾನಿತ್ವ ಅದಕ್ಕಿಂತ ಅತ್ಯಂತ ವಿಲಕ್ಷಣ. ಋಜುದೇವತೆಗಳು ಹಿಂದೆ ಏನು ನಡೆಯಿತು ಎಂದು ಆಲೋಚಿಸಿದಾಗ ಅವರಿಗೆ ಸರ್ವವೂ ತಿಳಿಯುತ್ತದೆ. ಭಗವಂತನ ತ್ರಿಕಾಲಜ್ಞಾನ ಹಾಗಲ್ಲ. ಏನೂ ಆಲೋಚಿಸದೆಯೇ ಸರ್ವವನ್ನೂ ಭಗವಂತ ತಿಳಿಯುತ್ತಾನೆ.

ಮಹಾಲಕ್ಷ್ಮಿದೇವಿಗೂ ಈ ರೀತಿ ಆಲೋಚಿಸದೇ ಸಕಲಕಾಲದಲ್ಲ ನಡೆದ ಸಕಲ ಘಟನೆಗಳನ್ನು ತಿಳಿಯುವ ಶಕ್ತಿಯಿದೆ. ಆದರೆ ದೇವರ ಜ್ಞಾನ ಅದಕ್ಕಿಂತಲೂ ವಿಲಕ್ಷಣ.

ಭಗವಂತ ಸ್ವತಂತ್ರವಾಗಿ ಸಕಲವನ್ನೂ ತಿಳಿದಿದ್ದಾನೆ. ಮಹಾಲಕ್ಷ್ಮಿಗೆ ಭಗವಂತ ನೀಡಿದ್ದಕ್ಕಾಗಿ ಆ ಜ್ಞಾನ ಬಂದಿದೆ.

ಮತ್ತೂ, ಕಾಲಾಂತರ್ಯಾಮಿ ಎಂಬಲ್ಲಿ ತಿಳಿದಂತೆ ಅನಂತ ಕಾಲದ ಹಿಂದಿನ ಘಟನೆಗಳನ್ನೂ , ಅನಂತ ಕಾಲದ ಮುಂದಿನ ಘಟನೆಯನ್ನೂ ಭಗವಂತ ಇಂದಿನ ಘಟನೆಯಂತೆ ಕಾಣುತ್ತಾನೆ. ಕಾರಣ ಆಯಾ ಕಾಲದ ಅಂತರ್ಯಾಮಿ ಅವನು.

ಹೀಗೆ ಸಮಗ್ರವಾದ ತ್ರಿಕಾಲಜ್ಞಾನ, ಆಲೋಚಿಸದೇ ಸ್ವಾಭಾವಿಕವಾಗಿ ಇರುವ ತ್ರಿಕಾಲಜ್ಞಾನ ಮತ್ತು ಸ್ವತಂತ್ರವಾದ ತ್ರಿಕಾಲಜ್ಞಾನ ಇರುವದರಿಂದ ಭಗವಂತ ತ್ರಿಕಾಲಜ್ಞ.

## ಕಾಲೋತ್ಪಾದಕ

ಕಾಲಕ್ಕೆ ಉತ್ಪತ್ತಿಯನ್ನು ನೀಡುವ ಭಗವಂತ ಕಾಲೋತ್ಪಾದಕ.

ಮಹಾನಾರಾಯಣೋಪನಿಷತ್ತಿನಲ್ಲಿ ನಿರೂಪಿತವಾದ ತತ್ವವಿದು, ಆಚಾರ್ಯರು ಅನುವ್ಯಾಖ್ಯಾನದಲ್ಲಿ ಈ ಶೃತಿವಾಕ್ಯವನ್ನು ಉದಾಹರಿಸಿ ತತ್ವವನ್ನು ತಿಳಿಸುತ್ತಾರೆ.

सर्वे निमेषा जज्ञिरे विद्युतः पुरुषादधि ।
कला मुहूर्ताः काष्ठाश्चाहोरात्राश्च सर्वशः ॥

ಕಾಲದಲ್ಲಿ ಎರಡು ವಿಧ. ಒಂದು ಮಹಾಕಾಲ ಮತ್ತೊಂದು ಸೂಕ್ಷ್ಮಕಾಲ ಅಥವಾ ಅವಾಂತರಕಾಲ. ಮಹಾಕಾಲಕ್ಕೆ ಹುಟ್ಟಿಲ್ಲ ಸಾವಿಲ್ಲ. ಆದರೆ ಅವಾಂತರಕಾಲಗಳು ಹುಟ್ಟುತ್ತವೆ ಮುಗಿಯುತ್ತವೆ.

ನದಿಯ ಉದಾಹರಣೆಯನ್ನು ತೆಗೆದುಕೊಂಡರೆ ಈ ತತ್ವ ನಮಗೆ ಸುಸ್ಪಷ್ಟವಾಗಿ ಅರ್ಥವಾಗುತ್ತದೆ. ಹಿಮಾಲಯದಿಂದ ಆರಂಭಿಸಿ

ಗಂಗಾಸಾಗರಸಂಗಮದವರೆ ಗಂಗಾನದಿ ಹರಿಯುತ್ತಿದೆ.

ಸಾವಿರ ವರ್ಷಗಳ ಹಿಂದೆಯೂ ಗಂಗಾನದಿ ಹರಿಯುತ್ತಿತ್ತು, ಸಾವಿರ ವರ್ಷದ ನಂತರವೂ ಗಂಗಾನದಿ ಹರಿಯುತ್ತಿದೆ. ಆದರೆ ಸಾವಿರ ವರ್ಷದ ಹಿಂದೆ ಇದ್ದ ನದಿಯ ನೀರಿನ ಕಣ ಬೇರೆ, ಈಗ ಇರುವ ನದಿಯ ಕಣ ಬೇರೆ.

ಗಂಗಾನದಿ ಅಂದೂ ಇತ್ತು, ಇಂದೂ ಇದೆ, ಮುಂದೂ ಇರುತ್ತದೆ. ಆದರೆ ಅಂದು ಇದ್ದ ನೀರು ಬೇರೆ ಇಂದಿರುವ ನೀರು ಬೇರೆ, ಮುಂದಿರುವ ನೀರು ಬೇರೆ. ವಿಚಿತ್ರ ಎಂದರೆ ನೀರೇ ಗಂಗೆ, ಗಂಗೆಯೆಂದರೇ ನೀರು.

ಹಾಗೆ ಕಾಲ ಅಂದೂ ಇತ್ತು, ಇಂದೂ ಇದೆ, ಮುಂದೂ ಇರುತ್ತದೆ. ಆದರೆ ಅಂದು ಇದ್ದ ಕಾಲ ಬೇರೆ, ಇಂದಿರುವ ಕಾಲ ಬೇರೆ, ಮುಂದಿರುವ ಕಾಲ ಬೇರೆ.

ಈ ರೀತಿಯಾಗಿ ಅವಾಂತರ ಕಾಲವನ್ನು ಸೃಷ್ಟಿಸಿ, ಪಾಲಿಸಿ ಮುಗಿಸುವವನು ಭಗವಂತ. ಕಾಲೋತ್ಪಾದಕ.

ಲವ, ಕ್ಷಣ, ನಿಮೇಷ, ವಿಘಟೀ, ಘಟೀ, ಮುಹೂರ್ತ, ಅಹೋರಾತ್ರ, ಪಕ್ಷ, ಮಾಸ, ಋತು, ಸಂವತ್ಸರ, ಯುಗ, ಕಲ್ಪ ಎಂದೆಲ್ಲ ಕಾಲದ ಪ್ರಭೇದಗಳನ್ನು ಹುಟ್ಟಿಸುವವನು ಕಾಲೋತ್ಪಾದಕನಾದ ಭಗವಂತ.

ಒಂದು ವಸ್ತು ಹುಟ್ಟಲು ಒಂದು ಅಧಿಷ್ಠಾನ ಬೇಕು. ಮಗು ಹುಟ್ಟಲು ತಾಯಿಬೇಕು. ಧಾನ್ಯ ಹುಟ್ಟಲು ಭೂಮಿ ಬೇಕು. ಹಾಗೆ ಕಾಲ ಎಲ್ಲಿ ಹುಟ್ಟುತ್ತದೆ? ಯಾವುದರಲ್ಲಿ ಹುಟ್ಟುತ್ತದೆ?

ದಾರ್ಶನಿಕರು ತುಂಬ ಚರ್ಚೆ ಮಾಡಿರುವ ಈ ವಿಷಯದ ಕುರಿತು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಉತ್ತರ ನೀಡಿದ್ದಾರೆ —

**ಕಾಲಸ್ಯ ಕಾಲಗತ್ವೇನ**
**ನ ವಿರೋಧೇಪಿ ಕಶ್ಚನ**
**ಈಶೋ ದೇಶಶ್ಚ ಕಾಲಶ್ಚ**
**ಸ್ವಗತಾ ಏವ ಸರ್ವದಾ**

ಶ್ರೀಹರಿ, ಅವ್ಯಾಕೃತ ಆಕಾಶ ಮತ್ತು ಕಾಲ ಈ ಮೂರು ಪದಾರ್ಥಗಳು ತಮ್ಮೊಳಗೇ ತಾವಿವೆ. ಅಂದರೆ ದೇವರ ಅಸ್ತಿತ್ವಕ್ಕೆ ಮತ್ತೊಂದು ಪದಾರ್ಥದ ಅಗತ್ಯವಿಲ್ಲ.

ಹಾಗೆಯೇ ಪ್ರದೇಶದ ಅಸ್ತಿತ್ವಕ್ಕೆ ಮತ್ತೊಂದು ದೇಶದ ಅಗತ್ಯವಿಲ್ಲ.

ಹಾಗೆಯೇ ಕಾಲದ ಉತ್ಪತ್ತಿಗೂ ಮತ್ತೊಂದು ಕಾಲದ ಅಗತ್ಯವಿಲ್ಲ. ಕಾಲ ತನ್ನೊಳಗೆ ತಾನೇ ಉತ್ಪತ್ತಿಯಾಗುತ್ತದೆ.

ಅಂದರೆ ಒಂದು ಕ್ಷಣ ಎನ್ನುವ ಕಾಲ ತನ್ನೊಳಗೇ ಹುಟ್ಟುತ್ತದೆ. ಮತ್ತೊಂದು ಕ್ಷಣದಲ್ಲಿ ಈ ಕ್ಷಣ ಹುಟ್ಟುವದಿಲ್ಲ.

ಶ್ರೀಹರಿ ತಾನು ಸ್ವಗತನಾದ್ದರಿಂದಲೇ ಕಾಲವನ್ನೂ ಸ್ವಗತವನ್ನಾಗಿಸಿ ಆಯಾಯ ಕಾಲದಲ್ಲಿ ಆಯಾಯ ಕಾಲದ ಉತ್ಪತ್ತಿಯನ್ನು ಮಾಡುತ್ತಾನೆ.

ಕಾಲದ ಉತ್ಪತ್ತಿಗೆ ಮತ್ತೊಂದು ಅಧಿಷ್ಠಾನದ ಆವಶ್ಯಕತೆಯಿಲ್ಲದಿದ್ದರೂ ಶ್ರೀಹರಿಯ ಆವಶ್ಯಕತೆಯಿದೆ. ಭಗವಂತನೇ ಆಯಾಯ ಕಾಲವನ್ನು ನಿರ್ಮಿಸುತ್ತಾನೆ, ಪಾಲಿಸುತ್ತಾನೆ, ಮತ್ತು ಮುಗಿಸುತ್ತಾನೆ. **“ವಿದ್ಯುತಃ ಪುರುಷಾತ್”** ಸದಾ ಪ್ರಕಾಶಮಾನನಾದ ಶ್ರೀಹರಿಯಿಂದ **“ಸರ್ವೇ ನಿಮೇಷಾ ಜಜ್ಞಿರೇ”** ಎಲ್ಲ ರೀತಿಯ ಕಾಲದ ಅವಯವಗಳೂ ಹುಟ್ಟಿವೆ ಎಂದು ವೇದಗಳು ತಿಳಿಸುತ್ತವೆ. ಆಚಾರ್ಯರು ಭಾಗವತ-ತಾತ್ಪರ್ಯದಲ್ಲಿ ಭವಿಷ್ಯತ್ಪರ್ವದ ವಚನದಿಂದ ನಿರ್ಣಯಿಸುತ್ತಾರೆ —

**ವಿಭಕ್ತ್ಯರ್ಥಸ್ಯ ಕಾಲಸ್ಯ**
**ಪ್ರಕಾರಾಣಾಂ ಚ ಕಾರಣಮ್**
**ಏಕ ಏವ ಪರೋ ವಿಷ್ಣುಃ**
**ಸರ್ವಸತ್ತಾಪ್ರದತ್ವತಃ**

## ಕಾಲಪ್ರವರ್ತಕ

ಕಾಲವನ್ನು ಉತ್ಕೃಷ್ಟವಾದ ಕ್ರಮದಲ್ಲಿ ನಡೆಸುವವನು ಕಾಲಪ್ರವರ್ತಕ. ಕಾಲಗಳಲ್ಲಿ ವಿಶೇಷಗಳನ್ನು ತುಂಬುವವನು.

ಶ್ರೀಮನ್ ಮಧ್ವಸಿದ್ಧಾಂತದ ಪರಮಮಂಗಳ ಪ್ರಮೇಯವಿದು.

ನೈಯಾಯಿಕರಲ್ಲಿ ಕಾಲದಲ್ಲಿ ಅನೇಕವಿಧವಿಲ್ಲ. ಅವರು **“ಆಕಾಶ-ಕಾಲ-ದಿಶಾಂ ಏಕ್ಕೈಕತ್ವಾತ್”** ಎಂದು ಎಲ್ಲಕಾಲವೂ ಒಂದೇ ಎಂದು ಹೇಳುತ್ತಾರೆ.

ಆದರೆ ವಸ್ತುಸ್ಥಿತಿಯಲ್ಲಿ ಹಾಗಿಲ್ಲ. ಎಲ್ಲ ಕಾಲವೂ ಒಂದೇ ಆಗಿದ್ದರೆ, ಈ ಕಾಲದಲ್ಲಿ ಮಳೆ, ಈ ಕಾಲದಲ್ಲಿ ಗಾಳಿ, ಈ ಕಾಲದಲ್ಲಿ ಬಿಸಿಲು, ಈ ಕಾಲದಲ್ಲಿ ಚಳಿ ಎಂದಿರಬಾರದಿತ್ತು. ಹಾಗೆಯೇ ಈ ಕಾಲದಲ್ಲಿ ಸೃಷ್ಟಿ, ಈ ಕಾಲದಲ್ಲಿ, ಸ್ಥಿತಿ, ಈ ಕಾಲದಲ್ಲಿ ಸಂಹಾರ ಎಂದಿರಬಾರದಿತ್ತು. ಎಲ್ಲವೂ ಒಂದೇ ಕಾಲದಲ್ಲಿ ಆಗಬೇಕಿತ್ತು. ಹಾಗಾಗುವದಿಲ್ಲ. ಅಂದಮೇಲೆ ಸೃಷ್ಟಿಕಾಲ ಬೇರೆ, ಸ್ಥಿತಿಕಾಲ ಬೇರೆ ಮತ್ತು ಸಂಹಾರಕಾಲ ಬೇರೆ ಎಂದೇ

ಸಿದ್ಧವಾಗುತ್ತದೆ. ಸೃಷ್ಟಿಯಾದ ತಕ್ಷಣ ಸಂಹಾರಕಾಲ ಬರುವದಿಲ್ಲ. ಸ್ಥಿತಿಕಾಲ ಬರುತ್ತದೆ. ಸ್ಥಿತಿಕಾಲದ ನಂತರ ಸೃಷ್ಟಿಕಾಲ ಬರುವದಿಲ್ಲ, ಸಂಹಾರಕಾಲ ಬರುತ್ತದೆ. ಸಂಹಾರಕಾಲವಾದ ಮೇಲೆ ಸ್ಥಿತಿಕಾಲ ಬರುವದಿಲ್ಲ, ಸೃಷ್ಟಿಕಾಲ ಬರುತ್ತದೆ.

ನೀವು ಹೇಳಬಹುದು. ಸೂರ್ಯ ಭೂಮಿಯಿಂದ ಇಷ್ಟು ದೂರವಿದ್ದಾಗ ಬಿಸಿಲುಕಾಲ. ಇಷ್ಟು ದೂರವಿದ್ದಾಗ ಮಳೆಗಾಲ ಎಂದು. ಆದರೆ ಸೂರ್ಯ-ಭೂಮಿಯರಲ್ಲಿ ಆ ರೀತಿಯ ಅಂತರ ಉಂಟಾದದ್ದು ಯಾವುದರಿಂದ? ಕಾಲದಿಂದ.

ಸೂರ್ಯ ಸಂಚರಣ ಮಾಡಬೇಕಾದರೆ ಕಾಲ ಬೇಕು. ಕಾಲವಿಲ್ಲದೇ ಸಂಚಾರವಾಗಲು ಸಾಧ್ಯವಿಲ್ಲ.

ಅಂದರೆ ಕಾಲದಲ್ಲಿ ವೈವಿಧ್ಯವಿದೆ. ಕಳೆದು ಹೋದ ಕಾಲ ಮತ್ತೆ ಬರುವದಿಲ್ಲ. ಆ ಕಾಲ ಬೇರೆ. ಈಗಿರುವ ಕಾಲ ಹಿಂದೆ ಬಂದಿರಲಿಲ್ಲ, ಮುಂದೆ ಬರುವದಿಲ್ಲ. ಈ ಕಾಲ ಬೇರೆ. ಮುಂದೆ ಬರುವ

ಕಾಲ ಹಿಂದೆ ಬಂದಿರಲಿಲ್ಲ, ಈಗ ಬಂದಿಲ್ಲ. ಈ ಕಾಲ ಬೇರೆ. ಹೀಗೆ ಕಾಲದಲ್ಲಿ ವೈವಿಧ್ಯ ಎನ್ನುವದು ಸಿದ್ಧವಾದ ವಿಷಯ.

ಒಂದೊಂದು ಕಾಲಕ್ಕೂ ಒಂದೊಂದು ವಿಶೇಷವಿದೆ. ಸೃಷ್ಟಿಕಾಲ, ಸ್ಥಿತಿಕಾಲ, ಸಂಹಾರಕಾಲ, ಮಳೆಗಾಲ, ಬಿಸಿಲುಗಾಲ, ಚಳಿಗಾಲ, ಉನ್ನತಿಯ ಕಾಲ, ಅವನತಿಯ ಕಾಲ, ಸುಖದ ಕಾಲ, ದುಃಖದ ಕಾಲ ಎಂದು. ಕಾಲದಲ್ಲಿ ಈ ಎಲ್ಲ ವಿಶೇಷಗಳನ್ನು ಪ್ರವರ್ತಿಸುವ ಹರಿಗೆ ಕಾಲಪ್ರವರ್ತಕ ಎಂದು ಹೆಸರು.

ನಿಮ್ಮ ಮನಸ್ಸಿನಲ್ಲಿ ಪ್ರಶ್ನೆ ಮೂಡಬಹುದು. ಸೃಷ್ಟಿಯಾದಾಗ ಸೃಷ್ಟಿಕಾಲ, ಮಳೆಯಾದಾಗ ಮಳೆಗಾಲ. ಕಾಲಕ್ಕೂ ಸೃಷ್ಟಿ, ಸ್ಥಿತಿ, ಸಂಹಾರಗಳಿಗೂ, ಮಳೆ ಗಾಳಿಗಳಿಗೂ, ಸುಖ ದುಃಖಗಳಿಗೂ ಸಂಬಂಧವಿಲ್ಲ, ಆ ಕಾಲದಲ್ಲಿ ಆ ಘಟನೆ ನಡೆದಾಗ ಆ ಕಾಲಕ್ಕೆ ಆ ಹೆಸರು ಬಂತಷ್ಟೆ. ಕಾಲದಿಂದ ಕಾರ್ಯಗಳು ನಡೆಯುತ್ತಿಲ್ಲ. ಕಾರ್ಯಗಳು ನಡೆಯುತ್ತಿದ್ದಂತೆ ಆ ಕಾರ್ಯದಿಂದ ಕಾಲವನ್ನು ಗುರುತಿಸುತ್ತೇವೆ ಎಂದು.

ಹಾಗಿಲ್ಲ. ನೀವು ಹುಣ್ಣಿಮೆಯ ಹಿಂದಿನ ರಾತ್ರಿಯ ಬೆಳದಿಂಗಳನ್ನು ಆಸ್ವಾದಿಸಿ. ಆ ಬೆಳಕನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳಿ. ಹುಣ್ಣಿಮೆಯ ರಾತ್ರಿಯ ಬೆಳದಿಂಗಳನ್ನು ಒಮ್ಮೆ ಆಸ್ವಾದಿಸಿ. ಅವತ್ತಿನ ರಾತ್ರಿಯ ಬೆಳಕನ್ನು ಪೂರ್ಣವಾಗಿ ಮನಸ್ಸಿಗೆ ತಂದುಕೊಳ್ಳಿ. ಮಾರನೆಯ ದಿವಸ ರಾತ್ರಿಯ ಬೆಳಕನ್ನೂ ನೋಡಿ. ಲೆಕ್ಕದ ಪ್ರಕಾರ ಹುಣ್ಣಿಮೆಯ ಹಿಂದಿನ ದಿವಸ ಎಷ್ಟು ಬೆಳಕಿರಬೇಕೋ ಅಷ್ಟೇ ಬೆಳಕು ಹುಣ್ಣಿಮೆಯ ಮಾರನೆ ದಿವಸ ಇರಬೇಕು. ಕಾರಣ ಚಂದ್ರಬಿಂಬದ ಗಾತ್ರ ಅಷ್ಟೇ ಇರುತ್ತದೆ. ಆದರೆ, ಬೆಳಕಿನಲ್ಲಿ ವ್ಯತ್ಯಾಸವಾಗಿರುತ್ತದೆ. ಕಾರಣ, ಹುಣ್ಣಿಮೆ ಮತ್ತು ಅದರ ಹಿಂದಿನ ದಿವಸ ಶುಕ್ಲಪಕ್ಷಕ್ಕೆ ಸೇರಿರುತ್ತದೆ, ಹುಣ್ಣಿಮೆಯ ಮಾರನೆಯ ದಿವಸ ಕೃಷ್ಣಪಕ್ಷಕ್ಕೆ ಸೇರಿರುತ್ತದೆ.

ನೀವು ಪ್ರತೀದಿವಸ ಸಂಜೆ ಕತ್ತಲಾಗುತ್ತಿದ್ದಂತೆ ಮನೆಯ ಮುಂದೆ ಹಣತೆ ಹಚ್ಚುತ್ತೀರಿ. ಕಾರ್ತೀಕಮಾಸದಲ್ಲಿಯೂ ಹಚ್ಚುತ್ತೀರಿ. ಕಾರ್ತಿಕದ

ದೀಪಕ್ಕಿರುವ ಸೊಬಗು, ಬೆಳಕು ಬೇರೆ ಯಾವ ಮಾಸದ ದೀಪಕ್ಕೂ ಇರುವದಿಲ್ಲ.

ಅಷ್ಟೇಕೆ, ಸೂರ್ಯನಿಂದ ಭೂಮಿಯಲ್ಲಿ ಮಳೆ ಬಿಸಿಲು ಉಂಟಾಗುತ್ತದೆ ಎನ್ನುವದನ್ನು ಇಂದಿನ ವಿಜ್ಞಾನವೂ ಒಪ್ಪಿದೆ.

ಹೋದ ವರ್ಷ ಇದೇ ದಿವಸ ಯಾವ ಭೂಮಿ, ಸೂರ್ಯ ಇದ್ದವೋ ಅದೇ ಸೂರ್ಯ ಭೂಮಿ ಈಗ ಇರುವದು. ವ್ಯತ್ಯಾಸವಾಗಿರುವದು ಕಾಲವೊಂದೇ. ಹೋದ ಬಾರಿ ಬಿಸಿಲು, ಮಳೆಗಳು ಬೇರೆ ರೀತಿ, ಈ ಬಾರಿಯ ಬಿಸಿಲು ಮಳೆಗಳು ಬೇರೆ ರೀತಿ. ಒಂದೇ ರೀತಿ ಇಲ್ಲ.

ಮತ್ತೂ ಒಂದು ದೃಷ್ಟಾಂತ. ನಮಗೆ ತುಂಬ ಪ್ರೀತಿಪಾತ್ರರೊಬ್ಬರು ಸತ್ತು ಹೋಗಿದ್ದಾರೆ. ಸತ್ತ ದಿವಸ ಇದ್ದ ದುಃಖ ಈ ದಿವಸ ಇಲ್ಲ. ಸತ್ತವರ ಮೇಲೆ ನಮಗೆ ಪ್ರೀತಿ ಕಡಿಮೆಯಾಗಿಲ್ಲ. ಕೆಲವು ಬಾರಿ ಇನ್ನೂ ಹೆಚ್ಚಾಗಿರುತ್ತದೆ. ಆದರೆ ದುಃಖ ಮಾತ್ರ ಆ ದಿವಸ ಇದ್ದಷ್ಟು ಈ ದಿವಸ ಇಲ್ಲ. ಅಂದಿಗೂ ಇಂದಿಗೂ ಬದಲಾಗಿರುವದು

ಕಾಲವೊಂದೇ. ಅಂದರೆ ಕಳೆದುಕೊಂಡ ಕ್ಷಣದಲ್ಲಿ ಇದ್ದ ದುಃಖ, ಈಗ ಇಲ್ಲ ಎಂದರೆ, ಆ ದುಃಖದ ಪರಿಣಾಮವನ್ನು ಕಡಿಮೆ ಮಾಡಿರುವುದ ಕಾಲವೇ ಹೊರತು ಮತ್ತೊಂದಲ್ಲ. ಅದಕ್ಕೇ ನಮ್ಮಲ್ಲಿ ಹೇಳುತ್ತಾರೆ, ಕಾಲಕ್ಕಿಂತ ಮದ್ದು ಮತ್ತೊಂದಿಲ್ಲ ಎಂದು. ಅಂದ ಮೇಲೆ ಆ ಕಾಲ ಬೇರೆ, ಈ ಕಾಲ ಬೇರೆ ಎನ್ನುವದು ಸಿದ್ಧವಾಯಿತು.

ಈ ರೀತಿಯಾಗಿ ಕಾಲದಲ್ಲಿ ವಿಶೇಷಗಳನ್ನು ತುಂಬುವ ಹರಿಗೆ ಕಾಲಪ್ರವರ್ತಕ ಎಂದು ಹೆಸರು. ವಿಶೇಷಕಾಲಗಳನ್ನು ಪ್ರವರ್ತಿಸುವವನು ಎಂದರ್ಥ.

ಅಷ್ಟೇ ಅಲ್ಲ, ಒಂದೇ ಕಾಲ ಒಬ್ಬೊಬ್ಬನಿಗೆ ಒಂದೊಂದು ರೀತಿ. ಒಬ್ಬನಿಗೆ ಸುಖ, ಇನ್ನೊಬ್ಬನಿಗೆ ದುಃಖ, ಮತ್ತೊಬ್ಬನಿಗೆ ತಟಸ್ಥಾವಸ್ಥೆ. ಈ ರೀತಿ ಒಂದೇ ಕಾಲವನ್ನು ಬೇರೆ ಬೇರೆ ರೀತಿಯಾಗಿ ನಡೆಸುವವನು ಕಾಲಪ್ರವರ್ತಕ.

## ಕಾಲನಿವರ್ತಕ

ಪ್ರವೃತ್ತಿ, ಪ್ರವರ್ತಕ ಎನ್ನುವ ಶಬ್ದಗಳ ವಿರುದ್ಧಾರ್ಥವನ್ನು ನೀಡುವ ಶಬ್ದಗಳು ನಿವೃತ್ತಿ ಮತ್ತು ನಿವರ್ತಕ ಎನ್ನುವ ಶಬ್ದಗಳು.

ಕಾಲವನ್ನು ಮುಂದೆ ನಡೆಸುವಂತೆ ಕಾಲವನ್ನು ನಿವೃತ್ತಿಗೊಳಿಸುವವನೂ ಭಗವಂತ. ತುಂಬ ಅದ್ಭುತವಾದ ಪ್ರಮೇಯ.

ನೋಡಿ, ಕರ್ಮಗಳನ್ನು ಎಂದೋ ಮಾಡಿರುತ್ತೇವೆ. ಅವು ಇಂದು ಮತ್ತೆ ಪ್ರವೃತ್ತವಾಗಿ ನಮಗೆ ಫಲಗಳನ್ನು ನೀಡುತ್ತವೆ.

ಆದರೆ ಕಾಲ ಹಾಗಲ್ಲ, ಒಮ್ಮೆ ನಿವೃತ್ತವಾದ ಬಳಿಕ ಆ ಕಾಲ ಎಂದಿಗೂ ನಮ್ಮ ಮೇಲೆ ಪರಿಣಾಮವನ್ನುಂಟು ಮಾಡುವದಿಲ್ಲ. ಹೀಗೆ ಕಾಲವನ್ನು ಸಂಪೂರ್ಣವಾಗಿ ನಿವೃತ್ತಿಗೊಳಿಸುವ ಭಗವಂತ ಕಾಲನಿವರ್ತಕ.

ಮತ್ತೂ, ನಮ್ಮ ಸುಖದ ಕಾಲವನ್ನಾಗಲೀ ದುಃಖದ ಕಾಲವನ್ನಾಗಲೀ ಕರ್ಮ ಮುಗಿದ ತಕ್ಷಣ ನಿವೃತ್ತಿಗೊಳಿಸುವವನು ಕಾಲನಿವರ್ತಕ.

ನಮ್ಮ ಸಂಸಾರದ ಕಾಲವನ್ನು ಶಾಶ್ವತವಾಗಿ ನಿವೃತ್ತಗೊಳಿಸಿ ನಮಗೆ ಮೋಕ್ಷವನ್ನೀಯುವ ದೇವರು ಕಾಲನಿವರ್ತಕ.

ವಿನಾಶದ ಕಾಲ, ಕಷ್ಟದ ಕಾಲ ಬಂದಿದ್ದಾಗ ಮೊರೆಹೊಕ್ಕರೆ ಕಾರುಣ್ಯದಿಂದ ಆ ಕಾಲವನ್ನು ನಿವೃತ್ತಗೊಳಿಸಿ ನಮ್ಮನ್ನು ಕಾಯುವ ಭಗವಂತ ಕಾಲನಿವರ್ತಕ.

ಕಾಲದ ಪರಿಣಾಮ ಲಕ್ಷ್ಮೀ-ಮುಕ್ತರ ಮೇಲೆ ಉಂಟಾಗದಂತೆ ಕಾಲವನ್ನು ಅವರಿಂದ ನಿವೃತ್ತಗೊಳಿಸುವ ಭಗವಂತ ಕಾಲನಿವರ್ತಕ.

ಬೇರೆ ಯಾವ ಪದಾರ್ಥಗಳಿಗೂ ನೀಡದ ವೈಶಿಷ್ಟ್ಯಗಳನ್ನು ಕಾಲಕ್ಕೆ ನೀಡಿ ಕಾಲವನ್ನು ನಿತರಾಂ ಪ್ರವರ್ತಿಸುವವನ್ನು ಕಾಲ-ನಿ-ವರ್ತಕ.

## ಕಾಲಮೂರ್ತಿ

ಪರಮಾತ್ಮನಿಗೆ ಕಾಲ ಎಂಬ ಹೆಸರಿನ ಅನೇಕ ರೂಪಗಳಿವೆ.

## ಸಕಲರೂಪಗಳೂ ಕಾಲಮೂರ್ತಿಗಳೇ

ಶ್ರೀಮದಾಚಾರ್ಯರು ಭಾಗವತತಾತ್ಪರ್ಯ-ನಿರ್ಣಯದಲ್ಲಿ ತಿಳಿಸುತ್ತಾರೆ —

**“ವಿಷ್ಣುಃ ಸರ್ವಗುಣೋದ್ರೇಕಾತ್ ಕಾಲ ಇತ್ಯಭಿಧೀಯತೇ”** ಎಂದು.

ಸರ್ವಗುಣಗಳನ್ನೂ ಪರಿಪೂರ್ಣವಾಗಿ ಪಡೆದ ಶ್ರೀಹರಿಗೆ ಕಾಲ ಎಂದು ಹೆಸರು. ಹರಿಯ ಸಕಲ ರೂಪಗಳೂ ಗುಣಪರಿಪೂರ್ಣರೂಪಗಳೇ ಆದ್ದರಿಂದ ಈ ಅರ್ಥದಲ್ಲಿ ದೇವರ ಎಲ್ಲ ರೂಪಗಳೂ ಕಾಲನಾಮಕ ರೂಪಗಳೇ.

## ಸರ್ವಸಂಹಾರಕನಾದ ಭಗವಂತ ಕಾಲಮೂರ್ತಿ

ಶ್ರೀಮದಾಚಾರ್ಯರು ಭಾಗವತತಾತ್ಪರ್ಯ-ನಿರ್ಣಯದಲ್ಲಿ ತಿಳಿಸುತ್ತಾರೆ —

**ಸಂಹರ್ತಾ ಭಗವಾನ್ ವಿಷ್ಣುಃ**
**ಕಾಲ ಇತ್ಯಭಿಧೀಯತೇ**

ವಿನಾಶದ ಕಾಲ ಅಥವಾ ಸಾವಿನ ಕಾಲ ಬಂದಾಗ “ಅವನ ಕಾಲ ಬಂದಿತು” ಎಂದು ನಾವು ಆಡುಭಾಷೆಯಲ್ಲಿ ಬಳಸುತ್ತೇವಲ್ಲ, ಆ ರೀತಿಯ ಪ್ರಯೋಗ ಭಾಗವತದಲ್ಲಿಯೂ ಇದೆ —

**“ಸ ಏಷ ಭಗವಾನ್ ಕಾಲಃ**
**ಸರ್ವೇಷಾಂ ನಃ ಸಮಾಗತಃ”**

ಎಂದು. ಆ ಮಾತಿಗೆ ವ್ಯಾಖ್ಯಾನ ಮಾಡುತ್ತ ಆಚಾರ್ಯರು ಕಾಲ ಎಂದರೆ ಸರ್ವಸಂಹಾರಕನಾದ ಭಗವಂತ ಎಂದು ಅರ್ಥ ತಿಳಿಸುತ್ತಾರೆ.

## ಸರ್ವವ್ಯಾಪ್ತನಿಗೆ ಕಾಲ ಎಂದು ಹೆಸರು

ಸಕಲಪ್ರದೇಶದಲ್ಲಿ ವ್ಯಾಪ್ತನಾದ ಶ್ರೀಹರಿಗೆ ಕಾಲ ಎಂಬ ಹೆಸರು ಎಂದು ಆಚಾರ್ಯರು ಭಾಗವತ ತಾತ್ಪರ್ಯನಿರ್ಣಯದಲ್ಲಿ ತಿಳಿಸುತ್ತಾರೆ —

> **"ಅಂತರ್ಯಾಮೀ ಪ್ರತ್ಯಗಾತ್ಮಾ**
> **ವ್ಯಾಪ್ತಃ ಕಾಲೋ ಹರಿಃ ಸ್ಮೃತಃ"**

> **"ಪುರುಷೋ ಹೃದಿಸ್ಥಃ ಪರಮಃ**
> **ಕಾಲಃ ಸರ್ವಗತೋ ಹರಿಃ"**

ನಮ್ಮ ಅಂತರ್ಯಾಮಿಗೆ ಪ್ರತ್ಯಗಾತ್ಮಾ, ಪುರುಷ ಎಂಬ ಹೆಸರುಗಳಿವೆ. ಸರ್ವತ್ರ ವ್ಯಾಪ್ತನಾದ ಶ್ರೀಹರಿಗೆ ಕಾಲ ಎಂಬ ಹೆಸರು. ಅದಕ್ಕೇ, ಅರ್ಜುನನಿಗೆ ದರ್ಶನ ನೀಡಿದ ವಿಶ್ವರೂಪದ ಭಗವಂತ "ಕಾಲೋಽಸ್ಮಿ ಲೋಕಕ್ಷಯಕೃತ್" ಎಂದು ಹೇಳುತ್ತಾನೆ.

ಹೀಗಾಗಿ ಸರ್ವವ್ಯಾಪ್ತನಾದ ಹಾಗೂ ಸರ್ವಸಂಹಾರಕನಾದ ಭಗವಂತನ ಹೆಸರು ಕಾಲ.

## ರುದ್ರದೇಹಸ್ಥನಿಗೆ ಕಾಲ ಎಂದು ಹೆಸರು

ರುದ್ರದೇವರ ದೇಹದಲ್ಲಿದ್ದು ಅವರಿಂದ ಕಾರ್ಯ ಮಾಡಿಸುವ ಶ್ರೀಹರಿಗೆ ಕಾಲ ಎಂದು ಹೆಸರು —

**"ಅಥವಾ ರುದ್ರದೇಹಸ್ಥೋ ಹರಿಃ ಕಾಲ ಇತೀರಿತಃ"**

ಹೀಗೆ, ಗುಣಪರಿಪೂರ್ಣ ಎಂಬ ಅರ್ಥದಲ್ಲಿ ಸಕಲ ಭಗವದ್ರೂಪಗಳೂ ಕಾಲಮೂರ್ತಿಗಳೇ.

ಸರ್ವಸಂಹಾರಕವಾದ, ಸರ್ವವ್ಯಾಪ್ತವಾದ ಮತ್ತು ರುದ್ರದೇವರ ದೇಹಸ್ಥವಾದ ಭಗವಂತನ ರೂಪ ಕಾಲಮೂರ್ತಿ ಎಂದು ಕರೆಸಿಕೊಳ್ಳುತ್ತವೆ.

## ಅನಂತ ಕಾಲದಲ್ಲಿ ಅನಂತ ಕಾಲಮೂರ್ತಿಗಳು

ಇದಲ್ಲದೇ ಬ್ರಹ್ಮಸೂತ್ರಗಳು ತಿಳಿಸುವಂತೆ ಸೂಕ್ಷ್ಮಾತಿಸೂಕ್ಷ್ಮ ಕಾಲದಿಂದ ಆರಂಭಿಸಿ ಮಹಾಕಾಲದವರೆಗಿನ ಸಮಸ್ತ ಕಾಲಗಳ ಸಕಲ ಅವಯವಗಳಲ್ಲಿಯೂ ಭಗವಂತ ಅಂತರ್ಯಾಮಿಯಾಗಿ ನಿಯಾಮಕನಾಗಿದ್ದಾನೆ. ಆ ಎಲ್ಲ ಅನಂತ ರೂಪಗಳೂ ಕಾಲಮೂರ್ತಿಗಳೇ.

ಹೀಗೆ ಕಾಲದ ಅಂತರ್ಯಾಮಿಯಾಗಿ ಕಾಲಾಂತರ್ಗತ, ಕಾಲವನ್ನು ನಿಯಮಿಸುವದರಿಂದ ಕಾಲನಿಯಾಮಕ, ಕಾಲದ ಪರಿಣಾಕ್ಕೆ ಒಳಗಾಗಿಲ್ಲವಾದ್ದರಿಂದ ಕಾಲಾತೀತ, ಮೂರೂ ಕಾಲದ ಘಟನೆಗಳನ್ನು ಸಮಗ್ರವಾಗಿ ಮತ್ತು ಸ್ವತಂತ್ರವಾಗಿ ತಿಳಿದಿದ್ದರಿಂದ ತ್ರಿಕಾಲಜ್ಞ, ಕಾಲವನ್ನು ಪ್ರಕೃಷ್ಟವಾದ ಕ್ರಮದಲ್ಲಿ ಮುಂದುವರೆಸುವದರಿಂದ ಕಾಲಪ್ರವರ್ತಕ, ಕಾಲವನ್ನು ನಿವೃತ್ತಗೊಳಿಸುವದರಿಂದ ಕಾಲನಿವರ್ತಕ, ಕಾಲವನ್ನು ಆಯಾ ಕಾಲದಲ್ಲಿಯೇ ಹುಟ್ಟಿಸುವದರಿಂದ ಕಾಲೋತ್ಪಾದಕ, ಕಾಲದ ಸೂಕ್ಷ್ಮಸೂಕ್ಷ್ಮ ಪ್ರಭೇದಗಳಲ್ಲಿರುವದರಿಂದ, ರುದ್ರದೇವರ ಅಂತರ್ಯಾಮಿಯಾದ, ಸರ್ವವ್ಯಾಪ್ತನಾದ, ಸರ್ವಸಂಹಾರಕನಾದ ಭಗವಂತ ಕಾಲಮೂರ್ತಿ.

ಅವನ ಚರಣಕ್ಕೆ ನಮ್ಮ ಅನಂತ ಕಾಲದ ಕರ್ಮಗಳನ್ನೂ ಸಮರ್ಪಿಸಿಕೊಳ್ಳೋಣ. ಶ್ರೀಕೃಷ್ಣ ಸದಾ ಒಲಿಯುತ್ತಿರಲಿ.

— ವಿಷ್ಣುದಾಸ ನಾಗೇಂದ್ರಾಚಾರ್ಯ